# ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003**

**ಸಂಖ್ಯೆ: ಕ್ಯೂ1/ಡಿ.ಇಎಲ್.ಇಡಿ/ಡಿ.ಇಡಿ/ಪರೀಕ್ಷೆ/ಮೇ-2019/43/2018-19** **ದಿನಾಂಕ:07.03.2019**

## ಅಧಿಸೂಚನೆ

ವಿಷಯ:- ಮೇ-2019ರ ಮಾಹೆಯಲ್ಲಿ ನಡೆಯಲಿರುವ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಪರೀಕ್ಷೆಗೆ ರಾಜ್ಯದ ಸರ್ಕಾರಿ ಡಿ.ಇಎಲ್.ಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ಕಾರ್ಯ ನಿರ್ವಹಿಸುತ್ತಿರುವ ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ:ಇಡಿ.218.ಎಸ್.ಎಲ್.ಬಿ.2016;ಬೆಂಗಳೂರು; ದಿನಾಂಕ:14.12.2016.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರು ಹೊರಡಿಸಿರುವ ಕರ್ನಾಟಕ ಪ್ರಾಥಮಿಕ ಶಿಕ್ಷಕ ಶಿಕ್ಷಣ ಪಠ್ಯಕ್ರಮ-2012 ಡಿಪ್ಲೊಮಾ ಇನ್ ಎಜುಕೇಷನ್ ಡಿ.ಎಡ್ ನಿಯಮಗಳು ಮತ್ತು ದಿನಾಂಕ:26.05.2015ರಂದು ನೀಡಿರುವ ಸ್ಪಷ್ಟೀಕರಣ.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಕರ್ನಾಟಕ ಪ್ರಾಥಮಿಕ ಶಿಕ್ಷಕರ ಶಿಕ್ಷಣ ಪಠ್ಯಕ್ರಮ ಪರಿಷ್ಕೃತ 2016 ಡಿಪ್ಲೊಮಾ ಇನ್ ಎಲಿಮೆಂಟರಿ ಎಜುಕೇಷನ್ ಡಿ.ಎಲ್.ಎಡ್ ನಿಯಮಗಳಿಗೆ ನೀಡಿರುವ ಸ್ಪಷ್ಟೀಕರಣ ಪತ್ರ ಸಂಖ್ಯೆ: ಶಿತ1/ಡಿ.ಎಲ್.ಎಡ್/ಪ.ನಿ/01/2016-17; ದಿನಾಂಕ:30.01.2017ರ ಸ್ಪಷ್ಟೀಕರಣ.
4. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಸುತ್ತೋಲೆ ಸಂಖ್ಯೆ:ಶಿತ2/ಡಿಪಿಐ/ಡಿಎಸ್ಇಆರ್‌ಟಿ/ಡಿ.ಇಡಿಕಾ/01/2018/27008/16; ದಿನಾಂಕ:17.05.2018.

************

2018-19ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ವಾರ್ಷಿಕ ಕಾರ್ಯ ಯೋಜನೆಯಂತೆ ಶೈಕ್ಷಣಿಕ ಅವಧಿ ಏಪ್ರಿಲ್-2019ರ ಅಂತ್ಯಕ್ಕೆ ಮುಕ್ತಾಯವಾಗಲಿದೆ. ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಹೊಸ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಬಾಹ್ಯ (ಥಿಯರಿ) ಪರೀಕ್ಷೆಯನ್ನು ದಿನಾಂಕ:14.05.2019 ರಿಂದ ದಿನಾಂಕ:24.05.2019 ರವರೆಗೆ ನಡೆಸಲು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿರ್ಧರಿಸಿದೆ. ಪರೀಕ್ಷಾ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಸರ್ಕಾರಿ ಡಿ.ಇಎಲ್.ಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ನಿಯಮಾನುಸಾರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಡಿ.ಇಡಿ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುತ್ತಾರೆ.

ಉಲ್ಲೇಖಿತ ಪತ್ರ (3)ರನ್ವಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಕ ಶಿಕ್ಷಣ ಡಿಪ್ಲೊಮಾ ಇನ್ ಎಲಿಮೆಂಟರಿ ಎಜುಕೇಷನ್ 2016 ಡಿ.ಇಎಲ್.ಇಡಿ ಪರಿಷ್ಕೃತ ಪಠ್ಯಕ್ರಮದಂತೆ ಜೂನ್ 2017 ರಿಂದ ಪ್ರಥಮ ಡಿ.ಇಎಲ್.ಇಡಿ ಮೇ 2018 ರಿಂದ ದ್ವಿತೀಯ ಡಿ.ಇಎಲ್.ಇಡಿಗೆ ಪರೀಕ್ಷೆ ನಡೆಸಲಾಗುತ್ತಿದೆ. ಜೂನ್ 2016 ಮತ್ತು 2017ರಲ್ಲಿ ಪ್ರಥಮ ಬಾರಿಯಾಗಿ ದ್ವಿತೀಯ ಡಿ.ಇಡಿ ಪರೀಕ್ಷೆ ಬರೆದು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹೊಸ ಪಠ್ಯವಸ್ತುವಿನಂತೆ ಪರೀಕ್ಷೆ ನಡೆಸಲಾಗುತ್ತಿದೆ.

2. **ದಾಖಲಾತಿ ಅನುಮೋದನಾ ಪಟ್ಟಿ:-**

2018-19ನೇ ಸಾಲಿನ ಸರ್ಕಾರಿ ಡಿ.ಇಎಲ್.ಇಡಿ ಸಂಸ್ಥೆಗಳು ಹಾಗೂ ಮಾನ್ಯತೆ ಪಡೆದು ಅಸ್ಥಿತ್ವದಲ್ಲಿರುವ ಖಾಸಗಿ ಡಿ.ಇಎಲ್.ಇಡಿ ಕಾಲೇಜುಗಳಿಗೆ ಸಂಬಂಧಿಸಿದಂತೆ, ಉಲ್ಲೇಖ(4)ರ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರ ನಿರ್ದೇಶನ ಮತ್ತು ಮಾರ್ಗದರ್ಶನಗಳಂತೆ, ಉಲ್ಲೇಖ (1)ರಿಂದ ಉಲ್ಲೇಖ (3)ರವರೆಗಿನ ಆದೇಶ ಮತ್ತು ಸ್ಪಷ್ಟೀಕರಣಗಳಂತೆ ಜಿಲ್ಲಾ ಡಯಟ್ ಪ್ರಾಂಶುಪಾಲರು ಪ್ರಥಮ ಡಿ.ಇಎಲ್.ಇಡಿ ವಿದ್ಯಾರ್ಥಿಗಳ ನಾಮಪಟ್ಟಿಯನ್ನು (Nominal Roll) ಪರಿಶೀಲಿಸಿ ಅನುಮೋದಿಸಿ ಮಂಡಳಿಗೆ ಕಳುಹಿಸುವುದು. ಸಂಬಂಧಿಸಿದ ಡಿ.ಇಎಲ್.ಇಡಿ ಕಾಲೇಜುಗಳಿಗೆ ಓ.ಎಂ.ಆರ್ ನಮೂನೆಗಳನ್ನು ಈಗಾಗಲೇ ಕಳುಹಿಸಲಾಗಿದೆ.

**ಡಯಟ್ ಪ್ರಾಂಶುಪಾಲರು ನಾಮಪಟ್ಟಿಯನ್ನು (Nominal Roll) ಪರಿಶೀಲಿಸುವಾಗ ಕೆಳಗಿನ ಅಂಶಗಳ ಬಗ್ಗೆ ಮನವರಿಕೆ ಮಾಡಿಕೊಂಡಿಬೇಕು.**

- ಡಿ.ಇಎಲ್.ಇಡಿ ಕಾಲೇಜು ಎನ್.ಸಿ.ಟಿ.ಇ ಯಿಂದ ಮಾನ್ಯತೆ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಎನ್.ಸಿ.ಟಿ.ಇ ಮಾನ್ಯತೆ ಪಡೆಯದ ಅನಧಿಕೃತ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಎನ್.ಸಿ.ಟಿ.ಇ ಮಾನ್ಯತೆ ಹಿಂಪಡೆದ ಡಿ.ಇಎಲ್.ಇಡಿ ಕಾಲೇಜುಗಳ ವಿದ್ಯಾರ್ಥಿಗಳು ಸಹ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಸರ್ಕಾರ ಅಥವಾ ಎನ್.ಸಿ.ಟಿ.ಇ ಯಿಂದ ನಿಗಧಿಪಡಿಸಿರುವ ದಾಖಲಾತಿ ಮಿತಿಯೊಳಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರಬೇಕು.
- ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ಅನುಮತಿ ನೀಡಿರುವ ವಿಳಾಸ ಮತ್ತು ಸ್ಥಳದಲ್ಲಿ ಸಂಸ್ಥೆ ನಡೆಯುತ್ತಿರಬೇಕು. ಸರ್ಕಾರ ಅಥವಾ ಎನ್.ಸಿ.ಟಿ.ಇ ಅನುಮತಿ ಆದೇಶವಿಲ್ಲದೆ ವಿಳಾಸ ಮತ್ತು ಸ್ಥಳ ಬದಲಾವಣೆಗೆ ಅವಕಾಶವಿಲ್ಲ.
- ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ನೀಡಲಾಗಿರುವ ಮಾಧ್ಯಮಕ್ಕೆ ಸಂಸ್ಥೆಯವರು ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡಿರಬೇಕು. ಜಿಲ್ಲಾ ಡಯಟ್ ಪ್ರಾಂಶುಪಾಲರುಗಳು ಸರ್ಕಾರ ಮತ್ತು ಎನ್.ಸಿ.ಟಿ.ಇ ಯಿಂದ ನೀಡಿರುವ ಮಾಧ್ಯಮಕ್ಕೆ ದಾಖಲಾತಿ ಅನುಮೋದಿಸಿರಬೇಕು.
- ಮಾಧ್ಯಮ ಬದಲಾವಣೆಗೆ ಸರ್ಕಾರದ ಅನುಮತಿ ಅಗತ್ಯತೆ ಇದೆ. ಸರ್ಕಾರದ ಅನುಮತಿ ಇಲ್ಲದೇ ಯಾವುದೇ ಸಂಸ್ಥೆ ಮಾಧ್ಯಮ ಬದಲಾವಣೆ ಮಾಡಿಕೊಂಡಿದ್ದಲ್ಲಿ ಆ ಸಂಸ್ಥೆಯ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಕೇಂದ್ರೀಕೃತ ದಾಖಲಾತಿ ಘಟಕದಿಂದ ಸರ್ಕಾರಿ ಕೋಟಾಗೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿರಬೇಕು. ಹಂಚಿಕೆ ಮಾಡಿರುವ ಪಟ್ಟಿಯಲ್ಲಿರುವ ವಿದ್ಯಾರ್ಥಿಗಳ ಹೆಸರು ಮಾತ್ರ, ನಾಮಪಟ್ಟಿ (Nominal Roll) ಯಲ್ಲಿರಬೇಕು.
- ಆಡಳಿತ ಮಂಡಳಿ ಕೋಟಾ ವಿದ್ಯಾರ್ಥಿಗಳ ದಾಖಲಾತಿಯನ್ನು ಡಯಟ್ ಪ್ರಾಂಶುಪಾಲರು ಅನುಮೋದಿಸಿರಬೇಕು. ಅನುಮೋದಿತ ಪಟ್ಟಿಯಲ್ಲಿನ ವಿದ್ಯಾರ್ಥಿಗಳ ಹೆಸರು ಮಾತ್ರ, ನಾಮಪಟ್ಟಿ ((Nominal Roll) ಯಲ್ಲಿರಬೇಕು.
- ಆಡಳಿತ ಮಂಡಳಿ ಕೇಂದ್ರಿಕೃತ ದಾಖಲಾತಿ ಘಟಕ ಅಥವಾ ಸರ್ಕಾರದಿಂದ ಅನುಮತಿ ಪಡೆದು ಸರ್ಕಾರಿ ಕೋಟಾದ ಉಳಿಕೆ ಸೀಟುಗಳಿಗೆ ದಾಖಲಾತಿ ಮಾಡಿಕೊಂಡಿದ್ದಲ್ಲಿ, ಡಯಟ್ ಪ್ರಾಂಶುಪಾಲರಿಂದ ಅನುಮೋದಿತವಾಗಿರಬೇಕು. ಅನುಮೋದಿತ ಪಟ್ಟಿಯಲ್ಲಿನ ವಿದ್ಯಾರ್ಥಿಗಳ ಹೆಸರು ಮಾತ್ರ ನಾಮಪಟ್ಟಿ (Nominal Roll) ಯಲ್ಲಿರಬೇಕು.
- ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ದಾಖಲಾತಿ ಅನುಮೋದನೆಯಾಗಿಲ್ಲದೇ ಇರುವ ವಿದ್ಯಾರ್ಥಿಯು ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

3. ಪರೀಕ್ಷಾ ಶುಲ್ಕ:-

ಪ್ರಥಮ ಡಿ.ಇಎಲ್.ಇಡಿ ಹೊಸ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ರೂ.1132-00 (ಲ್ಯಾಮಿನೇಷನ್ ಶುಲ್ಕ ಸೇರಿ) ನಿಗಧಿಪಡಿಸಿದೆ ಹಾಗೂ ದ್ವಿತೀಯ ಡಿ.ಇಎಲ್.ಇಡಿ ಹೊಸ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ರೂ.1170-00 (ಲ್ಯಾಮಿನೇಷನ್ ಶುಲ್ಕ ಸೇರಿ) ನಿಗಧಿಪಡಿಸಿದೆ. ಅದರಂತೆ ಶುಲ್ಕ ಪಾವತಿಸಬೇಕು. ಪರಿಶಿಷ್ಟ ಜಾತಿ/ವರ್ಗ ಮತ್ತು ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇದೆ. ಪರೀಕ್ಷಾ ಶುಲ್ಕ ವಿನಾಯಿತಿಯಿರುವಂತಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳ ಶುಲ್ಕವನ್ನು ಸಂಬಂಧಿಸಿದ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಅಲ್ಪ ಸಂಖ್ಯಾತರ ನಿರ್ದೇಶನಾಲಯದಿಂದ ನಿಯಮಾನುಸಾರ ಪಡೆದು ಸದರಿ ಮೊಬಲಗನ್ನು NEFT CHALLAN ಮುಖಾಂತರ ಮಂಡಳಿಗೆ ಪಾವತಿಸಿ ಚಲನ್ ಪ್ರತಿ ಸಲ್ಲಿಸುವುದು. ಅಲ್ಲದೇ ಈ ಹಿಂದಿನ ಸಾಲುಗಳಲ್ಲಿ ಶುಲ್ಕ ಪಾವತಿಸದೇ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳ ಬಾಕಿ ಪರೀಕ್ಷಾ ಶುಲ್ಕವನ್ನು ಆಯಾ ಸಂಸ್ಥೆಯ ಪ್ರಾಂಶುಪಾಲರು ಅತಿ ತುರ್ತಾಗಿ ವಿವರಗಳೊಂದಿಗೆ NEFT CHALLAN ಮುಖಾಂತರ ಪಾವತಿಸಿ ಚಲನ್ ಪ್ರತಿಯೊಂದಿಗೆ ಮಂಡಳಿಗೆ ತಪ್ಪದೇ ಕಳುಹಿಸಲು ತಿಳಿಸಿದೆ.

**ಪುನಾರಾವರ್ತಿತ ಪ್ರಥಮ/ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ವಿದ್ಯಾರ್ಥಿಗಳಿಗೆ ಒಂದು ವಿಷಯಕ್ಕೆ ರೂ.300-00, ಎರಡು ವಿಷಯಕ್ಕೆ ರೂ.600-00 ಮತ್ತು ಎರಡಕ್ಕಿಂತ ಹೆಚ್ಚು ವಿಷಯಗಳಿಗೆ ರೂ.1080-00 ಶುಲ್ಕ ನಿಗಧಿಪಡಿಸಿದೆ. ಅದರಂತೆ ಶುಲ್ಕ ಪಾವತಿಸಬೇಕು.**

ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಲೆಕ್ಕಾಚಾರ ಮಾಡಿ ಮೊತ್ತವನ್ನು NEFT CHALLAN ಮೂಲಕ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಬೇಕು. ಪಾವತಿಸುವ ಚಲನ್‌ನಲ್ಲಿ ವಿವರಗಳನ್ನು ನಮೂದಿಸಬೇಕು. ಭರ್ತಿ ಮಾಡಿದ NEFT CHALLAN ಒಂದನ್ನು ಬ್ಯಾಂಕಿನವರು ಇಟ್ಟುಕೊಂಡು ನೀಡುವ ಮತ್ತೊಂದು ಭಾಗದ ಮೂಲ CHALLAN ಪ್ರತಿ ಮಂಡಳಿಗೆ ಕಳುಹಿಸಬೇಕು. ಶುಲ್ಕ ಪಾವತಿಸಿದ ಬಗ್ಗೆ ಚಲನ್‌ನಲ್ಲಿ ಬ್ಯಾಂಕಿನ ಮೊಹರು ಮತ್ತು ಟಿ.ಎಸ್.ಎಲ್ ಅಥವಾ ಯು.ಟಿ.ಆರ್ (T.S.L OR U.T.R) ಸಂಖ್ಯೆ ಇರುವುದನ್ನು ಖಾತ್ರಿ ಪಡಿಸಿಕೊಳ್ಳುವುದು. ಪರೀಕ್ಷಾ ಶುಲ್ಕ ಪಾವತಿಸಿರುವ ಚಲನ್‌ನ ಛಾಯಾ ಪ್ರತಿಯನ್ನು (Xerox) ಆಯಾ ಡಿ.ಇಎಲ್.ಇಡಿ ಕಾಲೇಜಿನ ಪ್ರಾಂಶುಪಾಲರು ದಾಖಲೆಗಾಗಿ ಸಂರಕ್ಷಿಸಿಡಬೇಕು.

ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪರೀಕ್ಷಾ ಶುಲ್ಕವನ್ನು NEFT CHALLAN ಮೂಲಕ ಜಮಾ ಮಾಡಿರುವ ಚಲನ್ ಪ್ರತಿಯನ್ನು ವಿದ್ಯಾರ್ಥಿಗಳ ನಾಮಿನಲ್‌ರೋಲ್‌ನೊಂದಿಗೆ ಹಣಕಾಸು ನಮೂನೆ 1, 2, 3, 4 ಗಳನ್ನು ಪೂರ್ಣ ಭರ್ತಿ ಮಾಡಿ ಸಲ್ಲಿಸುವುದು.

ಸಂಸ್ಥೆಯು ಪಾವತಿಸಿರುವ ಪರೀಕ್ಷಾ ಶುಲ್ಕ ಲೆಕ್ಕಾಚಾರ ಸರಿಯಿರುವ ಬಗ್ಗೆ ಜಿಲ್ಲಾ ಡಯಟ್ ಪ್ರಾಂಶುಪಾಲರು ಖಾತ್ರಿಪಡಿಸಿಕೊಳ್ಳಬೇಕು. ನಿಗಧಿತ ಶುಲ್ಕ ಪಾವತಿ ಮಾಡಿದ್ದಲ್ಲಿ ಮಾತ್ರ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸಬೇಕು.

4. **NEFT CHALLAN, ಪರೀಕ್ಷಾ ಅರ್ಜಿಗಳು OMR, Nominal Roll ಮತ್ತು ಎಂಎಸ್‌ಎಗಳನ್ನು ಈ ಕೆಳಗೆ ನಿಗಧಿಪಡಿಸಿರುವ ದಿನಾಂಕದೊಳಗೆ ಸಲ್ಲಿಸುವುದು. ವಿಳಂಬವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.**

| ಕ್ರಮ ಸಂಖ್ಯೆ | ವಿವರ | ನಿಗಧಿಪಡಿಸಿರುವ ಅಂತಿಮ ದಿನಾಂಕ |
|---|---|---|
| 01 | ವಿದ್ಯಾರ್ಥಿಯು ದಂಡ ರಹಿತ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 20.03.2019 |
| 02 | ಕ್ರಮ ಸಂಖ್ಯೆ 01ರಂತೆ ಪಡೆದ ಪರೀಕ್ಷಾ ಶುಲ್ಕವನ್ನು ಬ್ಯಾಂಕಿಗೆ NEFT CHALLAN ಮೂಲಕ ಜಮಾ ಮಾಡಲು ಕೊನೆಯ ದಿನಾಂಕ | 22.03.2019 |
| 03 | ದಂಡ ಸಹಿತ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ (ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ರೂ.150/- ರಂತೆ ದಂಡ ವಿಧಿಸಲಾಗುತ್ತದೆ) | 27.03.2019 |
| 04 | ಕ್ರಮ ಸಂಖ್ಯೆ 03 ರಂತೆ ಪಡೆದ ಪರೀಕ್ಷಾ ಶುಲ್ಕವನ್ನು NEFT CHALLAN ಮೂಲಕ ಬ್ಯಾಂಕಿಗೆ ಜಮಾ ಮಾಡಲು ಕೊನೆ ದಿನಾಂಕ | 28.03.2019 |
| 05 | NEFT CHALLAN ಪ್ರತಿ, ಪರೀಕ್ಷಾ ಅರ್ಜಿಗಳು, ಓ.ಎಂ.ಆರ್, ನಾಮಿನಲ್‌ರೋಲ್ ಮತ್ತು ಎಂ.ಎಸ್.ಎ ಇತ್ಯಾದಿಗಳನ್ನು ಸಂಸ್ಥೆಯ ಪ್ರಾಂಶುಪಾಲರು ಜಿಲ್ಲಾ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ | 30.03.2019 |
| 06 | ರಾಜ್ಯದ ಎಲ್ಲಾ ಜಿಲ್ಲಾ ಡಯಟ್‌ನವರು, NEFT CHALLAN ಪ್ರತಿ, ಪರೀಕ್ಷಾ ಅರ್ಜಿಗಳು, ಓ.ಎಂ.ಆರ್, ನಾಮಿನಲ್ ರೋಲ್ ಮತ್ತು ಎಂ.ಎಸ್.ಎ ಇತ್ಯಾದಿಗಳನ್ನು ಪರಿಶೀಲಿಸಿ, ಕ್ರೋಢೀಕರಿಸಿ, ದೃಢೀಕರಿಸಿ ಮಂಡಳಿಗೆ ಖುದ್ದಾಗಿ ಸಲ್ಲಿಸಲು ಕೊನೆಯ ದಿನಾಂಕ | 04.04.2019 |

**5. ನೋಂದಣಿ ಮತ್ತು ಮರು ನೋಂದಣಿ ಶುಲ್ಕ ಪಾವತಿಸುವ ಬಗ್ಗೆ:-**

ಸರ್ಕಾರಿ ಆದೇಶ ಸಂಖ್ಯೆ: ಇಡಿ17-ಎಸ್‌ಎಕ್ಸ್‌ಎಂ 2006 ದಿನಾಂಕ:23.12.2006ರ ಪ್ರಕಾರ ಹೊಸ ಶಿಕ್ಷಣ ಸಂಸ್ಥೆಗಳಿಗೆ ನೋಂದಣಿ ಶುಲ್ಕ ರೂ.1000/- ಹಾಗೂ ಮಂಡಳಿಯಿಂದ ಈಗಾಗಲೇ ಸಂಕೇತ ಪಡೆದಿರುವ ಮತ್ತು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸುವ ಡಿ.ಇಎಲ್.ಇಡಿ ಕಾಲೇಜುಗಳು ಮರುನೋಂದಣಿ ಶುಲ್ಕ ರೂ.1000/-ಗಳನ್ನು NEFT CHALLAN ಮೂಲಕ ಜಮಾ ಮಾಡುವುದು ಕಡ್ಡಾಯವಾಗಿದೆ. ನೋಂದಣಿ/ಮರು ನೋಂದಣಿ ಶುಲ್ಕ ಪಾವತಿಸದ ಡಿ.ಇಎಲ್.ಇಡಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ನೋಂದಣಿ ಶುಲ್ಕ/ಮರು ನೋಂದಣಿ ಶುಲ್ಕವನ್ನು ಬ್ಯಾಂಕಿಗೆ ಸಲ್ಲಿಸಿದ NEFT CHALLAN ಪ್ರತಿಯನ್ನು ಮಂಡಳಿಗೆ ತಪ್ಪದೇ ಸಲ್ಲಿಸುವುದು.

**6. ಪ್ರಥಮ ಡಿ.ಇಎಲ್.ಇಡಿ ನಾಮಿನಲ್ ರೋಲ್ ಸಲ್ಲಿಸುವ ಬಗ್ಗೆ:-**

ಪ್ರಥಮ ಡಿ.ಇಎಲ್.ಇಡಿ ಹೊಸ ವಿದ್ಯಾರ್ಥಿಗಳ ನಾಮಿನಲ್ ರೋಲ್‌ನಲ್ಲಿ ಕ್ರಮಸಂಖ್ಯೆ ನಮೂದಿಸುವುದರ ಜೊತೆಗೆ ಸರ್ಕಾರಿ ಕೋಟಾದಲ್ಲಿನ ವಿದ್ಯಾರ್ಥಿಗೆ ಸಿ.ಎ.ಸಿಯ ಪಟ್ಟಿಯಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ ನಮೂದಿಸುವುದು. ಆಡಳಿತ ಮಂಡಳಿ ಕೋಟಾ ವಿದ್ಯಾರ್ಥಿಗೆ ಮ್ಯಾನೇಜ್‌ಮೆಂಟ್ ಕೋಟಾದಲ್ಲಿನ ಕ್ರಮ ಸಂಖ್ಯೆ ನಮೂದಿಸುವುದು. ಸರ್ಕಾರಿ ಕೋಟಾದಲ್ಲಿ ಭರ್ತಿಯಾಗದೇ, ಉಳಿಕೆಯಾಗಿರುವ ಸೀಟುಗಳನ್ನು ಕೇಂದ್ರಿಕೃತ ದಾಖಲಾತಿ ಘಟಕದ ಅನುಮತಿ ಪಡೆದು ಆಡಳಿತ ಮಂಡಳಿ ದಾಖಲಾತಿ ಮಾಡಿಕೊಂಡಿರುವ ಪಟ್ಟಿಯಲ್ಲಿನ ವಿದ್ಯಾರ್ಥಿಗಳ ಕ್ರಮ ಸಂಖ್ಯೆಯನ್ನು ತಪ್ಪದೇ ನಮೂದಿಸುವುದು.

ನಾಮಿನಲ್‌ರೋಲ್‌ನಲ್ಲಿ ವಿಷಯ ಸಂಕೇತ ಸಂಖ್ಯೆ ಮತ್ತು ವಿದ್ಯಾರ್ಥಿಯ ದಾಖಲಾತಿ ಅನುಮೋದನೆಯಾಗಿರುವ ಮಾಧ್ಯಮದಂತೆ ಮಾಧ್ಯಮ ತಪ್ಪಿಲ್ಲದೆ ನಮೂದಿಸುವುದು. ಬಾಹ್ಯ ಪರೀಕ್ಷೆಗಳು ಸೇರಿದಂತೆ ಆಂತರಿಕ ಮತ್ತು ಬೋಧನಾ ಅಭ್ಯಾಸದ ವಿಷಯಗಳ ವಿಷಯ ಸಂಕೇತಗಳ ಮಾಹಿತಿಯನ್ನು ನಾಮಿನಲ್‌ರೋಲ್‌ನಲ್ಲಿ ಹಿಂಬದಿಯಲ್ಲಿ ನಮೂದಿಸಲಾಗಿದೆ. ಅವುಗಳ ಬಗ್ಗೆ ಗಮನಹರಿಸುವುದು. ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ವಿದ್ಯಾರ್ಥಿಯು ವ್ಯಾಸಂಗ ಮಾಡಿರುವ ವಿಷಯ

ಸಂಕೇತಗಳನ್ನು ತಪ್ಪಿಲ್ಲದೇ ನಾಮಿನಲ್‌ರೋಲ್ ಮತ್ತು ಓ.ಎಂ.ಆರ್‌ನಲ್ಲಿ ಶೇಡ್ ಮಾಡುವುದು. ವಿಷಯ ಸಂಕೇತಗಳನ್ನು ನಮೂದಿಸುವಾಗ ಹೆಚ್ಚಿನ ಜಾಗ್ರತೆ ವಹಿಸುವುದು. ಅನುಮಾನಗಳಿದ್ದಲ್ಲಿ ಪರಿಹರಿಸಿಕೊಳ್ಳುವುದು.

**ಎಲ್ಲಾ ಸಂಸ್ಥೆಯ ಪ್ರಾಂಶುಪಾಲರು ಪ್ರಥಮ ಡಿ.ಇಎಲ್.ಇಡಿ ನಾಮಿನಲ್ ರೋಲ್‌ಗಳಲ್ಲಿ ಮತ್ತು ಓ.ಎಂ.ಆರ್‌ನಲ್ಲಿ ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು ಮತ್ತು ತಾಯಿಯ ಹೆಸರು, ಹುಟ್ಟಿದ ದಿನಾಂಕ, ಇತ್ಯಾದಿಗಳನ್ನು ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ (ಸ್ಪೆಲಿಂಗ್, ಇನಿಷಿಯಲ್, ಸರ್‌ನೇಮ್ ಸೇರಿದಂತೆ) ಪರಿಶೀಲಿಸಿ ತಪ್ಪಿಲ್ಲದೇ ಆಂಗ್ಲ ವರ್ಣಮಾಲೆಯಲ್ಲಿ ಅನುಕ್ರಮವಾಗಿ ನಮೂದಿಸಿ ಕಳುಹಿಸುವುದು. ತಾಯಿಯ ಹೆಸರು ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ಇಲ್ಲದೇ ಇದ್ದಲ್ಲಿ ದ್ವಿತೀಯ ಪಿ.ಯು.ಸಿ ಅಥವಾ ತಹಶೀಲ್ದಾರರಿಂದ ನೀಡಿರುವ ಕುಟುಂಬ ಪಡಿತರ ಚೀಟಿ, ಜಾತಿ ಪ್ರಮಾಣ ಪತ್ರ ಅಥವಾ ಸ್ಥಳೀಯ ವಾಸದ ವಿವರದ ಬಗ್ಗೆ ನೀಡಲಾಗಿರುವ ದೃಢೀಕರಣ ಪತ್ರಗಳ ಆಧಾರದ ಮೇಲೆ ನಮೂದಿಸುವುದು.**

**ಪ್ರಥಮ ಡಿ.ಇಡಿ (ಹೊಸಪಠ್ಯವಸ್ತು) ಮತ್ತು ಡಿ.ಇಎಲ್.ಇಡಿ ಪರಿಷ್ಕೃತ ಪಠ್ಯಕ್ರಮದನ್ವಯ ಬಾಹ್ಯ ಪರೀಕ್ಷೆಗೆ ವಿಷಯಗಳ ವಿವರ ನಿಗಧಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ**

| ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು | | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|---|
| | ಹೊಸ ಪಠ್ಯವಸ್ತು (NS) | ಪರಿಷ್ಕೃತ ಪಠ್ಯವಸ್ತು (RS) | | |
| ಶಿಕ್ಷಣ: ಮೂಲ ಪರಿಕಲ್ಪನೆಗಳ ಪರಿಚಯ<br>Education-Introduction to Basic Concepts | 102 | 302 | 60 | 3 ಘಂಟೆ |
| ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ) ಪ್ರಥಮ ಭಾಷೆ<br>Facilitating Learning (LPS) – First Language<br>ಕನ್ನಡ–Kannada | 104K | 304K | 60 | 3 ಘಂಟೆ |
| ಹಿಂದಿ– Hindi | 106H | 306H | | |
| ಉರ್ದು – Urdu | 108U | 308U | | |
| ಮರಾಠಿ – Marati | 110M | 310M | | |
| ತಮಿಳು – Tamil | 112T | 312T | | |
| ತೆಲುಗು – Telugu | 114L | 314L | | |
| ಕಲಿಕೆಯನ್ನು ಅನುಕೂಲಿಸುವುದು–ಗಣಿತ<br>Facilitating Learning (LPS) -Mathematics | 116 | 316 | 60 | 3 ಘಂಟೆ |
| ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ) – ಪರಿಸರ ಅಧ್ಯಯನ<br>Facilitating Learning (LPS)-Environmental Studies | 118 | 318 | 60 | 1 1/2 ಘಂಟೆ |
| ಇಂಗ್ಲೀಷ್ ಸಂವಹನಾ ಕೌಶಲಗಳು<br>Communication Skills In English | 120 | – | (25+5)<br>30 | 1 1/2 ಘಂಟೆ |
| | – | 320 | 25 | |
| ಶೈಕ್ಷಣಿಕ ಮೌಲ್ಯಾಂಕನ ಮತ್ತು ಮೌಲ್ಯಮಾಪನ<br>Educational Assessment & Evaluation | 122 | 322 | 30 | 1 1/2 ಘಂಟೆ |

**120E ಇಂಗ್ಲೀಷ್ ಸಂವಹನಾ ಸಾಮರ್ಥ್ಯ (Communication Skills in English) ಪರೀಕ್ಷೆ ನಡೆಸುವ ಬಗ್ಗೆ:-**

1. ಜೂನ್-20016ನೇ ಸಾಲಿನಲ್ಲಿ ಪ್ರಥಮ ಡಿ.ಇಡಿ ಪ್ರವೇಶ ಪಡೆದಿದ್ದು, 120E ಇಂಗ್ಲೀಷ್ ಸಂವಹನಾ ಸಾಮರ್ಥ್ಯ (Communication Skills in English) ಪರೀಕ್ಷೆಗೆ ಒಮ್ಮೆಯೂ ಹಾಜರಾಗದೇ ಇರುವ ಪುನರಾವರ್ತಿತ ವಿದ್ಯಾರ್ಥಿಗಳು ಮೇ 2019ರ ಪರೀಕ್ಷೆಗೆ ಹಾಜರಾದಲ್ಲಿ ಅಂತಹ ವಿದ್ಯಾರ್ಥಿಗಳಿಗೆ 05 ಅಂಕಗಳಿಗೆ ಮೌಖಿಕ ಪರೀಕ್ಷೆಯನ್ನು ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿ ನಡೆಸಲು ಅವಕಾಶ ಕಲ್ಪಿಸಿದೆ. ಡಯಟ್ ಪ್ರಾಂಶುಪಾಲರಿಂದ ರಚಿಸಲಾಗುವ ಸಮನ್ವಯ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ಸಹಿ ಮತ್ತು ದೃಢೀಕರಣದೊಂದಿಗೆ ಅಂಕತಃಖ್ತೆಯನ್ನು ಕಳುಹಿಸುವುದು. ಅಂತಹ ವಿದ್ಯಾರ್ಥಿಗಳ ಸಂಸ್ಥೆವಾರು ಪಟ್ಟಿಯನ್ನು ಪ್ರತ್ಯೇಕವಾಗಿ ಮಂಡಳಿಯಿಂದ ಕಳುಹಿಸಲಾಗುವುದು.
2. 120E ಇಂಗ್ಲೀಷ್ ಸಂವಹನಾ ಸಾಮರ್ಥ್ಯ (Communication Skills in English) ವಿಷಯದ ಬಾಹ್ಯ ಮತ್ತು ಮೌಖಿಕ ಪರೀಕ್ಷೆಗೆ ಈ ಹಿಂದಿನ ಸಾಲುಗಳಲ್ಲಿ ವಿದ್ಯಾರ್ಥಿಯು ಹಾಜರಿದ್ದು, ಬಾಹ್ಯ ಪರೀಕ್ಷೆಯಲ್ಲಿ ಅನುತ್ತೀರ್ಣ ಹೊಂದಿದಲ್ಲಿ ಅಂತಹ ವಿದ್ಯಾರ್ಥಿಗೆ ಪುನಃ ಮೌಖಿಕ ಪರೀಕ್ಷೆ ನಡೆಸಲು ಅವಕಾಶವಿಲ್ಲ. ವಿದ್ಯಾರ್ಥಿಯು ಪುನಃ ಮೌಖಿಕ ಪರೀಕ್ಷೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ. ಈ ಹಿಂದೆ ಮೌಖಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನೇ ಗಣನೆಗೆ ತೆಗೆದುಕೊಳ್ಳಲಾಗುವುದು.
3. ಪರಿಷ್ಕೃತ ಪಠ್ಯವಸ್ತುವಿನಂತೆ, ಇಂಗ್ಲೀಷಿನಲ್ಲಿ ಸಂವಹನಾ ಸಾಮರ್ಥ್ಯ-320E Communication Skills in English ಈ ವಿಷಯದ ಪ್ರಶ್ನೆ ಪತ್ರಿಕೆ ಗರಿಷ್ಠ 25 ಅಂಕಗಳಿಗೆ ನಿಗಧಿಪಡಿಸಿದೆ.

   ಪರಿಷ್ಕೃತ ಪಠ್ಯವಸ್ತುವಿನನ್ವಯ ಪ್ರಥಮ D.El.Ed Communicaton Skills in English-320E ಇಂಗ್ಲೀಷ್‌ನಲ್ಲಿ ಸಂವಹನಾ ಕೌಶಲಗಳು ವಿಷಯಕ್ಕೆ ಆಂತರಿಕ ಅಂಕಗಳು 25 ನಿಗಧಿಪಡಿಸಿದ್ದು, ಇದರಲ್ಲಿ 05 ಅಂಕಗಳ ಮೌಖಿಕ ಪರೀಕ್ಷೆಯನ್ನು ನಡೆಸುವುದು ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಡಯಟ್ ಪ್ರಾಂಶುಪಾಲರಿಂದ ರಚಿಸಲಾಗುವ ಸಮನ್ವಯ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಈ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ.

7. **ದ್ವಿತೀಯ ಡಿ.ಇಎಲ್.ಇಡಿ ಹೊಸ ವಿದ್ಯಾರ್ಥಿಗಳಿಗೆ ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ನಾಮಿನಲ್‌ರೋಲ್ ಕಳುಹಿಸುವ ಬಗ್ಗೆ:-**

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪರೀಕ್ಷೆಗಳಿಗೆ ಒಂದೇ ನೋಂದಣಿ ಸಂಖ್ಯೆಯನ್ನು (UNIQUE REG NO) ನೀಡಲಾಗುತ್ತಿದೆ. **ದ್ವಿತೀಯ ಡಿ.ಇಎಲ್.ಇಡಿ ವಿದ್ಯಾರ್ಥಿಗಳಿಗೆ ಓ.ಎಂ.ಆರ್ ಇರುವುದಿಲ್ಲ. ಮಂಡಳಿಯಿಂದ ನೀಡಿರುವ ಮುದ್ರಿತ (ಪ್ರಿಪ್ರಿಂಟೆಡ್) ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಮೇ-2019 ಎಂದು ನಮೂದಿಸಿ ಸಂಸ್ಥೆವಾರು ಪಟ್ಟಿಯನ್ನು ಕಳುಹಿಸಲಾಗಿದೆ.** ಸಂಸ್ಥೆಯ ಪ್ರಾಂಶುಪಾಲರು ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಪರಿಶೀಲಿಸುವಾಗ ಈ ಕೆಳಕಂಡ ಅಂಶಗಳ ಬಗ್ಗೆ ಗಮನಹರಿಸುವುದು.

- ಮಂಡಳಿಯಿಂದ ಕಳುಹಿಸಿರುವ ಪಟ್ಟಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ಆಯಾ ಸಂಸ್ಥೆಯಲ್ಲಿ ದ್ವಿತೀಯ ಡಿ.ಇಎಲ್.ಇಡಿ ವ್ಯಾಸಂಗ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಮಂಡಳಿಯಿಂದ ಕಳುಹಿಸಿರುವ ಪಟ್ಟಿಯಲ್ಲಿರುವ ವಿದ್ಯಾರ್ಥಿಗಳು ದ್ವಿತೀಯ ಡಿ.ಇಎಲ್.ಇಡಿಯಲ್ಲಿ ವ್ಯಾಸಂಗ ಮಾಡದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳ ಹೆಸರಿನ ಮೇಲೆ ಕೆಂಪು ಶಾಹಿಯಲ್ಲಿ ಅಡ್ಡಗೆರೆ ಎಳೆದು ಷರಾ ಕಾಲಂನಲ್ಲಿ ವ್ಯಾಸಂಗ ಮಾಡುತ್ತಿಲ್ಲ ಎಂದು ನಮೂದಿಸುವುದು.
- ದ್ವಿತೀಯ ಡಿ.ಇಎಲ್.ಇಡಿಗೆ ಪುನರ್‌ದಾಖಲಾತಿ ಹೊಂದಿದ್ದಲ್ಲಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಅಂತಹ ವಿದ್ಯಾರ್ಥಿಗಳ ಹೆಸರನ್ನು ಸೇರ್ಪಡೆ ಮಾಡುವುದು. ಸೇರ್ಪಡೆ ಮಾಡಿರುವಂತಹ ವಿದ್ಯಾರ್ಥಿಗಳ ಪ್ರಥಮ ಡಿ.ಇಎಲ್.ಇಡಿ ನೋಂದಣಿ ಸಂಖ್ಯೆ ವರ್ಷವನ್ನು ಷರಾ ಕಾಲಂನಲ್ಲಿ ನಮೂದಿಸುವುದು.
- ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಮಂಡಳಿಯಿಂದ ಅನುಮತಿ ಪಡೆದಿದ್ದಲ್ಲಿ, ಆ ವಿದ್ಯಾರ್ಥಿಯ ಹೆಸರು ಸೇರ್ಪಡೆ ಮಾಡಬೇಕು. ಷರಾ ಕಾಲಂನಲ್ಲಿ Improvement ಎಂದು ನಮೂದಿಸುವುದು.
- **ಎ) ಮಾನ್ಯ ಉಚ್ಚನ್ಯಾಯಾಲಯದ ಮಧ್ಯಂತರ ಆದೇಶದ ಮೇಲೆ ಕೆಲವೇ ಕೆಲವು ಕಾಲೇಜಿನ ಪ್ರಥಮ ಡಿ.ಇಎಲ್.ಇಡಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಮಂಡಳಿ ಅನುಮತಿ ನೀಡಿರುತ್ತದೆ. ಅಂತಹ ವಿದ್ಯಾರ್ಥಿಗಳು ದ್ವಿತೀಯ ಡಿ.ಇಎಲ್.ಇಡಿ ಪರೀಕ್ಷೆ ಬರೆಯಲು ನ್ಯಾಯಾಲಯದ ಆದೇಶವಿದ್ದಲ್ಲಿ ಮಾತ್ರ ಪ್ರೀಪ್ರಿಂಟೆಡ್ ಚೆಕ್‌ಲಿಸ್ಟ್ ನಾಮಿನಲ್‌ರೋಲ್ ದೃಢೀಕರಿಸಿ ಸಲ್ಲಿಸುವುದು. ಮಾನ್ಯ ಉಚ್ಚನ್ಯಾಯಾಲಯದ ಮಧ್ಯಂತರ ಆದೇಶಗಳು ದ್ವಿತೀಯ ಡಿ.ಇಡಿ ವಿದ್ಯಾರ್ಥಿಗಳಿಗೆ ನೀಡಿಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಹೆಸರನ್ನು ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಹೊಡೆದು ಹಾಕಿ, ಷರಾ ಕಾಲಂನಲ್ಲಿ ನಮೂದಿಸುವುದು.**
- ಬಿ) ಪ್ರಥಮ ಡಿ.ಇಎಲ್.ಇಡಿ ದಾಖಲಾತಿ ಅನುಮೋದಿಸಲು ಮತ್ತು ಪರೀಕ್ಷೆ ತೆಗೆದುಕೊಳ್ಳಲು ಮಾನ್ಯ ಉಚ್ಚನ್ಯಾಯಾಲಯವು ನಿರ್ದೇಶಿಸಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಮಂಡಳಿಯು ಅನುಮತಿ ನೀಡಿರುತ್ತದೆ. ಅಂತಹ ದಾವೆಗಳನ್ನು ನ್ಯಾಯಾಲಯವು ಇತ್ಯರ್ಥಪಡಿಸಿ ಅರ್ಜಿದಾರರ ಪರವಾಗಿ ಅಂತಿಮ ತೀರ್ಪು ನೀಡಿರುವ ಪ್ರಕರಣಗಳಲ್ಲಿ ಸ್ವಾಭಾವಿಕ ಬೆಳವಣಿಗೆಯಂತೆ, ಶೈಕ್ಷಣಿಕ ಚಟುವಟಿಕೆಗಳು ಪೂರೈಸಿರುವ ದ್ವಿತೀಯ ಡಿ.ಇಎಲ್.ಇಡಿ ವ್ಯಾಸಂಗ ಮಾಡಿದಲ್ಲಿ ಆ ವಿದ್ಯಾರ್ಥಿಗಳ ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಸಲ್ಲಿಸುವುದು. ಇಂತಹ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ, ಪುನಃ ನ್ಯಾಯಾಲಯದ ಆದೇಶದ ಅಗತ್ಯವಿರುವುದಿಲ್ಲ. (ಇದು ಸಂಬಂಧಿಸಿದ ಒಬ್ಬ ವಿದ್ಯಾರ್ಥಿ ಅಥವಾ ಹಲವು ವಿದ್ಯಾರ್ಥಿಗಳು ಅಥವಾ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ.)
- ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವರ್ಗಾವಣೆ ಮುಖಾಂತರ ದ್ವಿತೀಯ ಡಿ.ಇಎಲ್.ಇಡಿಗೆ ವಿದ್ಯಾರ್ಥಿ ದಾಖಲಾಗಿದ್ದರೆ, ಅಂತಹ ವಿದ್ಯಾರ್ಥಿಯ ಹೆಸರನ್ನು ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಸೇರ್ಪಡೆ ಮಾಡುವುದು. ಅಲ್ಲದೇ ಯಾವ ಸಂಸ್ಥೆಯಿಂದ ವರ್ಗಾವಣೆ ಹೊಂದಿದ್ದಾರೆ ಎಂಬುದಕ್ಕೆ ಷರಾ ಕಾಲಂನಲ್ಲಿ

ಸಂಸ್ಥೆಯ ಸಂಕೇತ ಹೆಸರು, ವಿಳಾಸವನ್ನು ನಮೂದಿಸುವುದು. ಈ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದ ಆದೇಶದ ಪ್ರತಿ ಸಲ್ಲಿಸುವುದು.

- ಪ್ರಥಮ ಡಿ.ಇಎಲ್.ಇಡಿ ವ್ಯಾಸಂಗ ಮಾಡಿದ ಸಂಸ್ಥೆಯಿಂದ ದ್ವಿತೀಯ ಡಿ.ಇಎಲ್.ಇಡಿ ವ್ಯಾಸಂಗಕ್ಕೆ ಬೇರೆ ಸಂಸ್ಥೆಗೆ ವರ್ಗಾವಣೆಗೊಂಡಿದಲ್ಲಿ, ಆ ವಿದ್ಯಾರ್ಥಿಯ ಹೆಸರನ್ನು ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಹೊಡೆದು ಹಾಕಿ ಬೇರೆ ಸಂಸ್ಥೆಗೆ ವರ್ಗಾವಣೆಗೊಂಡಿದ್ದಾರೆ ಎಂದು ಷರಾ ಕಾಲಂನಲ್ಲಿ ನಮೂದಿಸುವುದು.
- ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಬಾಹ್ಯ ವಿಷಯಗಳನ್ನು ನಮೂದಿಸಬೇಕಾಗಿರುತ್ತದೆ. ವಿಷಯ ಸಂಕೇತ, ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ ಇತ್ಯಾದಿ ವಿವರಗಳನ್ನು ಮುಂದಿನ ಪುಟದಲ್ಲಿ ನೀಡಲಾಗಿದೆ. ಅದರಂತೆ ವಿದ್ಯಾರ್ಥಿಯು ವ್ಯಾಸಂಗ ಮಾಡಿದ ವಿಷಯ ಮತ್ತು ಸಂಕೇತಗಳನ್ನು ನಮೂದಿಸುವಾಗ ಹೆಚ್ಚಿನ ಜಾಗ್ರತೆವಹಿಸುವುದು.

ಐಚ್ಛಿಕ ವಿಷಯಗಳಲ್ಲಿ ವಿದ್ಯಾರ್ಥಿಯು ಒಂದು ಐಚ್ಛಿಕ ವಿಷಯವನ್ನು ಮಾತ್ರ ಆಯ್ಕೆ ಮಾಡಬೇಕು. ಆಯ್ಕೆ ಮಾಡಿದ ವಿಷಯದ ಸಂಕೇತ ಸಂಖ್ಯೆಯ ಮೇಲೆ ಕೆಂಪು ಶಾಯಿಯಲ್ಲಿ ( ✓ ) ಗುರುತು ಮಾಡಬೇಕು. ಹೀಗೆ ಗುರುತಿಸುವಾಗ ತಪ್ಪು ಮಾಡಿದ್ದಲ್ಲಿ ಅಥವಾ ಗುರುತು ಮಾಡದಿದ್ದಲ್ಲಿ ಪ್ರತಿ ವಿದ್ಯಾರ್ಥಿಗೆ ರೂ.100/– ರಂತೆ ಸಂಸ್ಥೆಯ ಪ್ರಾಂಶುಪಾಲರಿಗೆ ದಂಡ ವಿಧಿಸಲಾಗುವುದು.

- ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಪಟ್ಟಿಯ ಕೊನೆಯ ಪುಟದಲ್ಲಿ ದ್ವಿತೀಯ ಡಿ.ಇಎಲ್.ಇಡಿ ಮೇ 2019ರ ಪರೀಕ್ಷೆಗೆ ಹೊಸ ವಿದ್ಯಾರ್ಥಿಗಳಾಗಿ (FRESHERS) ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯನ್ನು ಅಕ್ಷರಗಳಲ್ಲಿ ನಮೂದಿಸುವುದು.
- ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಪರೀಕ್ಷಾ ಶುಲ್ಕದ ವಿವರದೊಂದಿಗೆ **ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಯ ಸಹಿ ಕಡ್ಡಾಯವಾಗಿರಬೇಕು. ಯಾವುದೇ ವಿದ್ಯಾರ್ಥಿಯ ಸಹಿ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಇಲ್ಲದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಯ ಪರೀಕ್ಷಾ ಅರ್ಜಿ ತಿರಸ್ಕರಿಸಲಾಗುವುದು.** ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿಲ್ಲದಿರುವುದರಿಂದ ಸಂಬಂಧಿಸಿದ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ವಿತರಿಸಲಾಗುವುದಿಲ್ಲ.

ಡಿ.ಇಲ್.ಇಡಿ ಕಾಲೇಜಿನ ಪ್ರಾಂಶುಪಾಲರುಗಳು ಸಲ್ಲಿಸಿರುವ ದ್ವಿತೀಯ ಡಿ.ಇಎಲ್.ಇಡಿ ಚೆಕ್‌ಲಿಸ್ಟ್ ನಾಮಿಲ್‌ರೋಲ್‌ನ್ನು ಜಿಲ್ಲಾ ಡಯಟ್ ಪ್ರಾಂಶುಪಾಲರು ಅಂಶವಾರು ಅಕ್ಷರಶಃ ಪರಿಶೀಲಿಸಿ ಸರಿಯಾಗಿರುವುದನ್ನು ಖಚಿತಪಡಿಸಿಕೊಂಡು ಮೇಲು ಸಹಿ ಮಾಡುವುದು.

ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಬಾಹ್ಯ ವಿಷಯಗಳ ವಿವರ, ನಿಗಧಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ,

| ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು | | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|---|
| | ಹೊಸ ಪಠ್ಯವಸ್ತು (NS) | ಪರಿಷ್ಕೃತ ಪಠ್ಯವಸ್ತು (RS) | | |
| ರೂಢಿಯಾಗಿ ಶಿಕ್ಷಣ Education as Practice | 242 | 442 | 60 | 3 ಘಂಟೆ |
| ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ) ಪ್ರಥಮ ಭಾಷೆ Facilitating Learning (LPS) – First Language ಕನ್ನಡ–Kannada | 244K | 444K | 60 | 3 ಘಂಟೆ |
| ಹಿಂದಿ– Hindi | 246H | 446H | | |
| ಉರ್ದು – Urdu | 248U | 448U | | |
| ಮರಾಠಿ – Marati | 250M | 450M | | |
| ತಮಿಳು – Tamil | 252T | 452T | | |
| ತೆಲುಗು – Telugu | 254L | 454L | | |
| ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ)– ಇಂಗ್ಲೀಷ್ Facilitating Learning (HPS)- English | 256 | 456 | 60 | 3 ಘಂಟೆ |
| ಐಚ್ಛಿಕ ವಿಷಯಗಳು (ಯಾವುದಾದರೂ ಒಂದು) Optional Subjects (Any one) | | | 60 | 3 ಘಂಟೆ |
| ವಿಜ್ಞಾನ– Science | 258 | 458 | | |
| ಗಣಿತ – Mathematics | 260 | 460 | | |
| ಸಮಾಜ ವಿಜ್ಞಾನ – Social Science | 262 | 462 | | |

**8. ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪುನರಾವರ್ತಿತ ವಿದ್ಯಾರ್ಥಿಗಳ ಎಂ.ಎಸ್.ಎ ಮತ್ತು ನಾಮಿನಲ್‌ರೋಲ್ ಬಗ್ಗೆ:-**

ಡಿಸೆಂಬರ್ 2018ರ ಪೂರಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪ್ರಥಮ/ದ್ವಿತೀಯ ಡಿ.ಇಡಿ/ಡಿ.ಇಎಲ್.ಇಡಿ ವಿದ್ಯಾರ್ಥಿಗಳ ಎಂ.ಎಸ್.ಎ ಗಳನ್ನು ಈಗಾಗಲೇ ಡಯಟ್‌ಗಳ ಮುಖಾಂತರ ರವಾನಿಸಿದೆ. ಡಿಸೆಂಬರ್ 2018ಕ್ಕೂ ಪೂರ್ವದಲ್ಲಿನ ಅನುತ್ತೀರ್ಣ ವಿದ್ಯಾರ್ಥಿಗಳ ಎಂ.ಎಸ್.ಎ ಕಾರಣಾಂತರಗಳಿಂದ ಲಭ್ಯವಿಲ್ಲದಿದ್ದಲ್ಲಿ ಮಂಡಳಿಗೆ ರೂ.50/– ಶುಲ್ಕ ಪಾವತಿಸಿ ಮುದ್ರಿತ ಎಂ.ಎಸ್.ಎ ಪಡೆಯುವುದು. ಮುದ್ರಿತ ಎಂ.ಎಸ್.ಎ ಭರ್ತಿಮಾಡಿ ವಿದ್ಯಾರ್ಥಿಯ ಸಹಿ, ವಿದ್ಯಾರ್ಥಿಯ ಭಾವಚಿತ್ರ ಅಂಟಿಸಿ, ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಿ ಸಲ್ಲಿಸುವುದು. ಖಾಲಿ ಎಂ.ಎಸ್.ಎಯಲ್ಲಿ ಭರ್ತಿ ಮಾಡಿರುವ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ಮಂಡಳಿ ಪರಿಗಣಿಸುವುದಿಲ್ಲ. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಅನುತ್ತೀರ್ಣ ಹೊಂದಿರುವ ಪ್ರಥಮ ಮತ್ತು ದ್ವಿತೀಯ ಡಿ.ಇಡಿ/ಡಿ.ಇಎಲ್.ಇಡಿ ಪುನರಾವರ್ತಿತ ವಿದ್ಯಾರ್ಥಿಗಳ ಎಂ.ಎಸ್.ಎ ಕಡ್ಡಾಯವಾಗಿ ಕಳುಹಿಸಬೇಕು. ಎಂ.ಎಸ್.ಎಯಲ್ಲಿ ಭಾವಚಿತ್ರ ಕಡ್ಡಾಯವಾಗಿ ಅಂಟಿಸಬೇಕು. ವಿದ್ಯಾರ್ಥಿಯ ಸಹಿ ಹಾಗೂ ಸಂಸ್ಥೆಯ ಪ್ರಾಂಶುಪಾಲರ ಸಹಿ ಮತ್ತು ದೃಢೀಕರಣದೊಂದಿಗೆ ಕಳುಹಿಸಬೇಕು. ಪುನರಾವರ್ತಿತ ವಿದ್ಯಾರ್ಥಿಗಳ ನಾಮಿನಲ್‌ರೋಲ್ ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಿರುವುದನ್ನು ಜಿಲ್ಲಾ ಡಯಟ್ ಪ್ರಾಂಶುಪಾಲರು ಪರಿಶೀಲಿಸಿ ಮೇಲು ಸಹಿ ಮಾಡುವುದು.

**9.ಹಾಜರಾತಿ:-**

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಹೊಸ ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ ಒಟ್ಟು ಕೆಲಸದ ದಿನಗಳಲ್ಲಿ ಕನಿಷ್ಠ ಶೇಕಡ 80ರಷ್ಟು ಹಾಜರಾತಿ ಇರುವುದು ಕಡ್ಡಾಯ. ಶೇಕಡ 80ರಷ್ಟು ಹಾಜರಾತಿ ಇಲ್ಲದ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಶೇ.10ರಷ್ಟು ವಿನಾಯಿತಿಯನ್ನು ನೀಡಲು ಸಂಸ್ಥೆಯ ಪ್ರಾಂಶುಪಾಲರಿಗೆ ಅವಕಾಶವಿದೆ ಹಾಗೂ ಮಂಡಳಿಯು ಶೇ15ರಷ್ಟು ಗೈರುಹಾಜರಿಯನ್ನು ಮನ್ನಾ ಮಾಡುತ್ತದೆ. ಅಂದರೆ, ಸಂಸ್ಥೆಯ ಪ್ರಾಂಶುಪಾಲರು ನೀಡುವ ಶೇ10ರ ವಿನಾಯಿತಿ ನಂತರ ಶೇ 5ರಷ್ಟು ಹಾಜರಾತಿ ವಿನಾಯಿತಿಯನ್ನು ಮಂಡಳಿಯು ಮನ್ನಾ ಮಾಡುತ್ತದೆ. ಅಂತಹ ಪ್ರಕರಣಗಳ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರು ಆಯಾ ಡಯಟ್ ಪ್ರಾಂಶುಪಾಲರ ಮುಖಾಂತರ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿ ಮಂಡಳಿಯ ಅನುಮತಿ ಪಡೆಯುವುದು.

**10. ಪುನರ್ ದಾಖಲಾತಿ ಮತ್ತು ವರ್ಗಾವಣೆ ಹೊಂದಿರುವ ವಿದ್ಯಾರ್ಥಿಗಳ ಮಾಹಿತಿ ಬಗ್ಗೆ:-**

ದ್ವಿತೀಯ ಡಿ.ಇಎಲ್.ಇಡಿಗೆ ಜಿಲ್ಲೆಯೊಳಗೆ ಪುನರ್‌ದಾಖಲಾತಿಯಾಗಿದ್ದಲ್ಲಿ, ಜಿಲ್ಲಾ ಡಯಟ್ ಪ್ರಾಂಶುಪಾಲರ ಜ್ಞಾಪನ ಆದೇಶವಿರಬೇಕು. ಅಂತರ್ ಜಿಲ್ಲಾ ಪುನರ್ ದಾಖಲಾತಿಯಾಗಿದ್ದಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರಿಂದ ಅನುಮತಿ ಪಡೆದಿರುವ ಜ್ಞಾಪನ ಆದೇಶವಿರಬೇಕು. ದ್ವಿತೀಯ ಡಿ.ಇಎಲ್.ಇಡಿಗೆ ಪುನರ್ ದಾಖಲಾತಿ ಹೊಂದುವ ವಿದ್ಯಾರ್ಥಿಗಳು ಪರಿಷ್ಕೃತ ಪಠ್ಯವಸ್ತುವಿನಂತೆ (Revised Syllabus) ನಂತೆ ಪರೀಕ್ಷೆ ಬರೆಯಬೇಕು.

ವರ್ಗಾವಣೆ ಅಥವಾ ಪುನರ್‌ದಾಖಲಾತಿಗೆ ಅನುಮತಿ ಇಲ್ಲದೇ ಇರುವ ವಿದ್ಯಾರ್ಥಿಯ ಪರೀಕ್ಷಾ ಅರ್ಜಿಯನ್ನು ತಿರಸ್ಕರಿಸಲಾಗುವುದು. ಆದ್ದರಿಂದ ಪುನರ್‌ದಾಖಲಾತಿ ವಿದ್ಯಾರ್ಥಿಗಳ ಮತ್ತು ವರ್ಗಾವಣೆ ಹೊಂದಿದ ವಿದ್ಯಾರ್ಥಿಗಳ ಜ್ಞಾಪನ ಆದೇಶಗಳು ಕಡ್ಡಾಯವಾಗಿ ಸಲ್ಲಿಸಬೇಕು.

**11. ಪ್ರಯತ್ನಗಳ ಮಿತಿ:-**

ಹೊಸ ಪಠ್ಯವಸ್ತು ಕ್ರಮದನ್ವಯ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಅಂತಿಮ ಕಾಲಾವಕಾಶ ನೀಡಲಾಗಿರುತ್ತದೆ.

| ಕ್ರಮ ಸಂಖ್ಯೆ | ದ್ವಿತೀಯ ಡಿ.ಇಡಿ ವ್ಯಾಸಂಗ ಮಾಡಿ ಪ್ರಥಮಬಾರಿಯಾಗಿ ಪರೀಕ್ಷೆ ಬರೆದ ವರ್ಷ | ಅಂತಿಮ ಕಾಲಾವಕಾಶ/ಅಂತಿಮ ಪ್ರಯತ್ನ |
|---|---|---|
| **01** | **ಜೂನ್ 2016** | **ಜೂನ್ 2019** |
| **02** | **ಜೂನ್ 2017** | **ಜೂನ್ 2020** |

ಆಯಾ ಸಾಲಿನಲ್ಲಿ ದ್ವಿತೀಯ ಡಿ.ಇಡಿ ಪ್ರಥಮಬಾರಿಗೆ ಪರೀಕ್ಷೆ ಬರೆದು ಅನುತ್ತೀರ್ಣ ಹೊಂದಿರುವ ವಿದ್ಯಾರ್ಥಿಗಳು ಮೇಲಿನಂತೆ ಸೂಚಿಸಿರುವ ಅಂತಿಮ ಕಾಲಾವಕಾಶದೊಳಗೆ ಅನುತ್ತೀರ್ಣ ಹೊಂದಿರುವ ಪ್ರಥಮ/ದ್ವಿತೀಯ ಡಿ.ಇಡಿ ಬಾಹ್ಯ, ಆಂತರಿಕ, ಪ್ರಾಯೋಗಿಕ ಹಾಗೂ ನಿಕಟಸೇವಾ ತರಬೇತಿಯನ್ನು ಪೂರ್ಣಗೊಳಿಸಿಕೊಳ್ಳಬೇಕು. **ಪ್ರಥಮ ಬಾರಿಗೆ ಜೂನ್ 2016ರಲ್ಲಿ ದ್ವಿತೀಯ ಡಿ.ಇಡಿ ಹೊಸಪಠ್ಯವಸ್ತುವಿನಂತೆ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಮೇ 2019ರ ಪರೀಕ್ಷೆ ಅಂತಿಮ ಕಾಲಾವಕಾಶವಾಗಿದೆ. ಅದೇ ರೀತಿ ಜೂನ್-2017ರಲ್ಲಿ ದ್ವಿತೀಯ ಡಿ.ಇಡಿ ಹೊಸ ಪಠ್ಯವಸ್ತುವಿನಂತೆ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಜೂನ್ 2020ರ ಪರೀಕ್ಷೆ ಅಂತಿಮ ಕಾಲಾವಕಾಶವಾಗಿದೆ. ಈ ವಿಚಾರವನ್ನು ವಿದ್ಯಾರ್ಥಿಗಳ ಮತ್ತು ಪೋಷಕರ ಗಮನಕ್ಕೆ ತಂದು ಅಂತಿಮ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸುವುದು ಕಡ್ಡಾಯವಾಗಿರುತ್ತದೆ. ಅಂತಿಮ ಕಾಲಾವಕಾಶದ ಬಗ್ಗೆ ಮನದಟ್ಟು ಮಾಡುವುದು. ವ್ಯಾಪಕ ಪ್ರಚಾರ ಮಾಡುವುದು. ಆಯಾ ಸಂಸ್ಥೆಯ ಆಧ್ಯ ಕರ್ತವ್ಯವಾಗಿರುತ್ತದೆ.**

**12. ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ನೀಡಿರುವ ಬಗ್ಗೆ:-**

ಪ್ರಥಮ/ದ್ವಿತೀಯ ಡಿ.ಇಎಲ್.ಇಡಿ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಉಲ್ಲೇಖಿತ (3) ಮತ್ತು (4)ರ ಆದೇಶದಲ್ಲಿನ ಷರತ್ತುಗಳನ್ವಯ ಮಂಡಳಿಯಿಂದ ಅನುಮತಿ ಪಡೆದಿರಬೇಕು. ಅನುಮತಿ ಪಡೆದಿರುವ ಆದೇಶದ ಪ್ರತಿಯೊಂದಿಗೆ ಚೆಕ್‌ಲಿಸ್ಟ್ ನಾಮಿನಲ್‌ರೋಲ್‌ನಲ್ಲಿ ಸೇರ್ಪಡಿಸಿ ಷರಾ ನಮೂದಿಸುವುದು.

**13. ಪರೀಕ್ಷಾ ಅವ್ಯವಹಾರಗಳಿಂದ ಉಚ್ಚಾಟಿಸಿರುವ (ಎಂ.ಎಲ್.ಪಿ) ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಬಗ್ಗೆ:-**

ಪ್ರಥಮ ಮತ್ತು ದ್ವಿತೀಯ ಡಿ.ಇಡಿ/ಡಿ.ಇಎಲ್.ಇಡಿ ಪರೀಕ್ಷೆಯಲ್ಲಿ ಅವ್ಯವಹಾರಗಳನ್ನು ನಡೆಸಿ ಉಚ್ಚಾಟನೆಗೊಂಡಿರುವ ವಿದ್ಯಾರ್ಥಿಗಳ ಉಚ್ಚಾಟನಾ ವರ್ಷಗಳ ಅವಧಿ ಮುಕ್ತಾಯಗೊಂಡಿದ್ದಲ್ಲಿ, ಆ ವಿದ್ಯಾರ್ಥಿಗಳು ಮೇ 2019ರ ಪರೀಕ್ಷೆ ಬರೆಯಲು ಅರ್ಹರಿದ್ದಲ್ಲಿ, ಎಂ.ಎಲ್.ಪಿ ಪ್ರಕರಣವೆಂದು ಪ್ರತ್ಯೇಕವಾಗಿ ನಾಮಿನಲ್‌ರೋಲ್ ಸಲ್ಲಿಸುವುದು. ಮಂಡಳಿಯಿಂದ ಹೊರಡಿಸಿರುವ ಜ್ಞಾಪನ ಆದೇಶದ ಪ್ರತಿ ಲಗತ್ತಿಸುವುದು. ನಾಮಿನಲ್‌ರೋಲ್‌ನಲ್ಲಿ ದಪ್ಪ ಅಕ್ಷರದಲ್ಲಿ (Block Letters) ಕೆಂಪು ಶಾಹಿಯಲ್ಲಿ ನಮೂದಿಸಬೇಕು.

**14. ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಮತ್ತು ಹೆಚ್ಚಿನ ಕಾಲಾವಕಾಶ ನೀಡುವ ಬಗ್ಗೆ:-**

ವಿಭಿನ್ನ ಸಾಮರ್ಥ್ಯವುಳ್ಳ (Differently Abled) ವಿಕಲಚೇತನ ವಿದ್ಯಾರ್ಥಿಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಇಡಿ98/ಇಎಸ್‌ಡಬ್ಲ್ಯೂ2009 ದಿನಾಂಕ:10.06.2009ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಅಂಗವೈಕಲ್ಯತೆ ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಾಲಾವಕಾಶ ಮತ್ತು ಬರಹಗಾರರ ಸೌಲಭ್ಯಗಳನ್ನು ನೀಡುವ ಬಗ್ಗೆ ಜಿಲ್ಲಾ ಡಯಟ್ ಪ್ರಾಂಶುಪಾಲರ ಹಂತದಲ್ಲಿ ಕ್ರಮಕೈಗೊಳ್ಳುವುದು. ಸರ್ಕಾರಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಯಾವುದೇ ವ್ಯತ್ಯಾಸವಾದಲ್ಲಿ ಜಿಲ್ಲಾ ಡಯಟ್ ಪ್ರಾಂಶುಪಾಲರನ್ನು ನೇರಹೊಣೆಗಾರರನ್ನಾಗಿ ಮಾಡಲಾಗುವುದು.

**15. ಆಯಾ ಪಠ್ಯವಸ್ತುವಿನಂತೆ, ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ಬಗ್ಗೆ:-**

ವಿದ್ಯಾರ್ಥಿಗಳು, ಪರೀಕ್ಷೆ ತೆಗೆದುಕೊಂಡಿರುವ ಪಠ್ಯವಸ್ತುವಿನಂತೆ ಪರೀಕ್ಷೆ ಬರೆಯಬೇಕು. ಪಠ್ಯವಸ್ತುವಿನ ಬದಲಾವಣೆಗೆ ಅವಕಾಶವಿಲ್ಲ. ಈ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವುದು. ವಿದ್ಯಾರ್ಥಿಯು ಆಯ್ಕೆ ಮಾಡಿಕೊಂಡು ವ್ಯಾಸಂಗ ಮಾಡಿದ ಪಠ್ಯವಸ್ತುವಿನಂತೆ ಪರೀಕ್ಷೆ ಬರೆಯದೇ, ಬೇರೆ ಪಠ್ಯವಸ್ತುವಿನಂತೆ ಪರೀಕ್ಷೆ ಬರೆದಿದ್ದಲ್ಲಿ, ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ. ಅಂತಹ ವಿಷಯಗಳಿಗೆ (Subjects) ವಿದ್ಯಾರ್ಥಿಯು ಗೈರುಹಜರಾಗಿದ್ದಾರೆಂದು (Absent) ಎಂದು ಪರಿಗಣಿಸಲಾಗುವುದು. ಮುಂಬರುವ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ವ್ಯಾಸಂಗ ಮಾಡಿದ ಪಠ್ಯವಸ್ತುವಿನಂತೆ, ಪುನಃ ಪರೀಕ್ಷೆ ಬರೆಯಬೇಕಾಗುತ್ತದೆ.

**16. ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಓ.ಎಂ.ಆರ್‌ನಲ್ಲಿ ಮತ್ತು ದ್ವಿತೀಯ ಡಿ.ಇಡಿ/ಡಿ.ಇಎಲ್.ಇಡಿ ಎಂಎಸ್‌ಎಯಲ್ಲಿ ವಿದ್ಯಾರ್ಥಿಯ ಭಾವಚಿತ್ರ ಅಂಟಿಸುವ ಬಗ್ಗೆ:-**

ಪ್ರಥಮ ಡಿ.ಇಎಲ್.ಇಡಿ ಹೊಸ ವಿದ್ಯಾರ್ಥಿಗಳಿಗೆ ಓ.ಎಂ.ಆರ್‌ನಲ್ಲಿ ಭಾವಚಿತ್ರ ಕಡ್ಡಾಯವಾಗಿ ಅಂಟಿಸುವುದು. ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಪುನರಾವರ್ತಿತ ವಿದ್ಯಾರ್ಥಿಗಳ ಭಾವಚಿತ್ರವನ್ನು ಮಂಡಳಿಯ ಪರಿಶೀಲನೆಗಾಗಿ ಎಂ.ಎಸ್.ಎಯಲ್ಲಿ ಕಡ್ಡಾಯವಾಗಿ ಅಂಟಿಸುವುದು. ಓ.ಎಂ.ಆರ್ ಮತ್ತು ಎಂ.ಎಸ್.ಎ ಯಲ್ಲಿ ನಿಗಧಿತ ಸ್ಥಳಗಳಲ್ಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಅಂಟಿಸಿ ಸಹಿ ಪಡೆಯಬೇಕು. ಯಾವ ಕಾರಣಕ್ಕೂ ಭಾವಚಿತ್ರಗಳ ಮೇಲೆ ಸಂಸ್ಥೆಯ ಪ್ರಾಂಶುಪಾಲರ ರುಜು ಮತ್ತು ಸಂಸ್ಥೆಯ ಮೊಹರು ಹಾಕತಕ್ಕದ್ದಲ್ಲ.

ಒಮ್ಮೆ ಓ.ಎಂ.ಆರ್‌ನಲ್ಲಿ ವಿದ್ಯಾರ್ಥಿ ಭಾವಚಿತ್ರ ಅಂಟಿಸಿ ಕಳುಹಿಸಿರುವುದು ಅಂತಿಮ. ತದನಂತರ ವಿದ್ಯಾರ್ಥಿಯ ಭಾವಚಿತ್ರ ಬದಲಾವಣೆಗೆ ಅವಕಾಶವಿಲ್ಲ. ಆದ್ದರಿಂದ ಅತಿಜಾಗರೂಕತೆಯಿಂದ ಆಯಾ ವಿದ್ಯಾರ್ಥಿಯ ಭಾವಚಿತ್ರ ಅಂಟಿಸಿರುವುದು ಸರಿಯಿದೆಯೇ? ಎಂದು ಖಚಿತಪಡಿಸಿಕೊಳ್ಳುವುದು. ಸಂಬಂಧಿಸಿದ ವಿದ್ಯಾರ್ಥಿಗಳ ಹೆಸರುಗಳನ್ನು ನಾಮಿನಲ್‌ರೋಲ್‌ನಲ್ಲಿ ಸಂಸ್ಥೆಯ ಪ್ರಾಂಶುಪಾಲರುಗಳು ನಮೂದಿಸಿ ದೃಢೀಕರಿಸಿರುವುದನ್ನು ಜಿಲ್ಲಾ ಡಯಟ್ ಪ್ರಾಂಶುಪಾಲರು ಪರಿಶೀಲಿಸಿ ಮೇಲು ಸಹಿ ಮಾಡುವುದು. ಆಯಾ ಕಾಲೇಜಿನ ದಾಖಲಾತಿಗನುಗುಣವಾಗಿ ಓ.ಎಂ.ಆರ್ ನೀಡಲಾಗಿದೆ. ಓ.ಎಂ.ಆರ್‌ಗಳನ್ನು ನೇರವಾಗಿ ಸ್ಕ್ಯಾನ್ ಮಾಡುವುದರಿಂದ ವಿದ್ಯಾರ್ಥಿಯ ನಿಖರ ಮಾಹಿತಿಯನ್ನು ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸುವುದು. ಅತಿ ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಶೇಡ್ ಮಾಡುವುದು. ತಪ್ಪು ಶೇಡ್ ಮಾಡಿದ್ದಲ್ಲಿ ಸಂಸ್ಥೆಯ ಪ್ರಾಂಶುಪಾಲರಿಗೆ ದಂಡ ವಿಧಿಸಲಾಗುವುದು.

ಪರೀಕ್ಷಾ ಅರ್ಜಿ ಓ.ಎಂ.ಆರ್ ಅಥವಾ ಎಂ.ಎಸ್.ಎ ಯಲ್ಲಿ ನೈಜ ವಿದ್ಯಾರ್ಥಿಯ ಬದಲು ಬೇರೆ ವಿದ್ಯಾರ್ಥಿಯ ಭಾವಚಿತ್ರ ಅಂಟಿಸಿ, ಪರೀಕ್ಷೆಯಲ್ಲಿ ನಕಲು ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೆರವಾಗುವ ಸಂಸ್ಥೆಯ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇಂತಹ ದೋಷಗಳನ್ನು ಪರಿಶೀಲಿಸದೇ, ಖಾತ್ರಿಪಡಿಸಿಕೊಳ್ಳದೇ ಯಥಾವತ್ತಾಗಿ ಕಳುಹಿಸುವ ಜಿಲ್ಲಾ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

ಮೇಲೆ ನೀಡಿರುವ ಸೂಚನೆ ಜೊತೆಗೆ ಸರ್ಕಾರ, ಮಂಡಳಿ ಮತ್ತು ರಾಜ್ಯ ಶಿಕ್ಷಣ ಮತ್ತು ಸಂಶೋಧನೆ ತರಬೇತಿ ನಿರ್ದೇಶನಾಲಯರವರಿಂದ ಡಿ.ಇಎಲ್.ಇಡಿ ಪರೀಕ್ಷೆಗೆ ಕಾಲಕಾಲಕ್ಕೆ ನೀಡಿದ ಎಲ್ಲಾ ಸೂಚನೆಗಳನ್ನು ಸಂಸ್ಥೆಯ ಪ್ರಾಂಶುಪಾಲರು ಹಾಗೂ ಜಿಲ್ಲಾ ಡಯಟ್ ಪ್ರಾಂಶುಪಾಲರು ಪಾಲಿಸಬೇಕು. ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಿಸಿದವರು ಹೊಣೆಗಾರರಾಗಿರುತ್ತಾರೆ.

**ವಿಶೇಷ ಸೂಚನೆ:-**

1. ಪರೀಕ್ಷೆ ಸಂಬಂಧದ ಶುಲ್ಕಗಳನ್ನು ಪರಿಷ್ಕರಿಸಲಾಗಿದೆ. ಪ್ರಥಮ/ದ್ವಿತೀಯ ಡಿ.ಇಡಿ/ಡಿ.ಇಎಲ್.ಇಡಿ ಎಂ.ಎಸ್.ಎ ಮತ್ತು ನಾಮಿನಲ್‌ರೋಲ್‌ಗಳಲ್ಲಿ ಹೊಸ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಶುಲ್ಕವು ಹಳೇ ದರದಂತೆ ಇದ್ದಲ್ಲಿ ಅದನ್ನು ಪರಿಗಣಿಸಬಾರದು. ಈ ಅಧಿಸೂಚನೆಯಲ್ಲಿ ಕ್ರಮ ಸಂಖ್ಯೆ 03ರಲ್ಲಿ ವಿವರಿಸಿರುವಂತೆ ಪರೀಕ್ಷಾ ಶುಲ್ಕ ಪಾವತಿಸಬೇಕು.
2. ಆಯಾ ಜಿಲ್ಲಾ ವ್ಯಾಪ್ತಿಯ ಡಿ.ಇಎಲ್.ಇಡಿ ಸಂಸ್ಥೆಗಳ ವಿದ್ಯಾರ್ಥಿಗಳ ನಾಮಿನಲ್‌ರೋಲ್‌ನ್ನು ಓ.ಎಂ.ಆರ್ ಮತ್ತು ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಹಾಗೂ ಮತ್ತಿತರೆ ಎಲ್ಲಾ ಮಾಹಿತಿಗಳನ್ನು ಜಿಲ್ಲಾ ಡಯಟ್ ಪ್ರಾಂಶುಪಾಲರು ಅನುಮೋದಿಸಿ ಮೇಲು ಸಹಿ ಮಾಡಿ ಪರಿಶೀಲಿಸಿ ಪರೀಕ್ಷಾ ಮಂಡಳಿಗೆ ಡಯಟ್ ಸಿಬ್ಬಂದಿ ಮೂಲಕ ದಿನಾಂಕ:04.04.2019 ರಂದು ತಪ್ಪದೇ ಸಲ್ಲಿಸುವುದು.

**ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗೆ "ಶ್ರೀ ಎನ್.ಕೋದಂಡರಾಮಯ್ಯ, ಹಿರಿಯ ಸಹಾಯಕ ನಿರ್ದೇಶಕರು, ಕ್ಯೂ-ಶಾಖೆ, ಮೊಬೈಲ್ ಸಂಖ್ಯೆ:9535537641 ದೂರವಾಣಿ ಸಂಖ್ಯೆ:080-23460525" ಸಂಪರ್ಕಿಸುವುದು.**

(ಕೆ.ಎಸ್.ಮಣಿ)
ನಿರ್ದೇಶಕರು (ಇತರೆ ಪರೀಕ್ಷೆಗಳು)

ಇವರಿಗೆ:-

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ಕಳುಹಿಸುತ್ತಾ, ತಕ್ಷಣವೇ ನಿಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಡಿ.ಇಡಿ ಸಂಸ್ಥೆಗಳಿಗೆ ಅಧಿಸೂಚನೆಯ ಪ್ರತಿಗಳನ್ನು ವಿತರಿಸಿ ಸೂಕ್ತ ಕ್ರಮವಹಿಸಲು ಕಳುಹಿಸಿದೆ.
2. ಎಲ್ಲಾ ಡಿ.ಇಡಿ ಸಂಸ್ಥೆಯ ಪ್ರಾಂಶುಪಾಲರಿಗೆ ಜಿಲ್ಲಾ ಡಯಟ್ ಪ್ರಾಂಶುಪಾಲರ ಮುಖಾಂತರ.
3. ಕಛೇರಿ ಪ್ರತಿ.